

# ದಮಯಂತಿಯ ಮಗಳು

ತೆಲುಗು ಮೂಲ: **ಪಿ. ಸತ್ಯವತಿ**
ಕನ್ನಡಕ್ಕೆ: **ಅಜಯ್ ವರ್ಮಾ ಅಲ್ಲೂರಿ**
ಕಲೆ: ವೆಂಕಟ್ರಮಣ ಭಟ್

ರವಿವಾರದ ದಿನ ಸೂರ್ಯ ನನ್ನ ಕೋಣೆಯನ್ನು ಪ್ರವೇಶಿಸದಂತೆ ಕಿಟಕಿಯ ತೆರೆಯನ್ನು ಇಳಿಬಿಟ್ಟೇ ಇರುತ್ತೇನೆ. ಆದರೆ ರವಿವಾರ, ಸೋಮವಾರಗಳ ದಿನಭೇದವಿಲ್ಲದಂತೆ ಆರು ಗಂಟೆಗೇ ಎದ್ದು, ಹಳೆಯ ಹಿಂದೀ ಹಾಡುಗಳ ಹಿಮ್ಮೇಳದಲ್ಲಿ ಕಾಫಿಯನ್ನೂ, ಆಂಗ್ಲ–ತೆಲುಗು ಪತ್ರಿಕೆಗಳನ್ನೂ, ಅವುಗಳ ಪುರವಣಿಗಳನ್ನೂ ಸವಿಯುತ್ತಾ ಕುಳಿತುಬಿಡುವ ಸ್ನೇಹ, ನನ್ನ ದೀರ್ಘ ನಿದ್ದೆಯನ್ನು ಸಹಿಸಲಾರಳು.